# ಅಂಗೈಯಲ್ಲಿ ಅರಮನೆ

## ಹಡಗು ಎಂದರೇನು?

ಆಂಗ್ಲ ಮಾಧ್ಯಮದಲ್ಲಿ ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ಮಗಳು ಆದ್ಯಾಳಿಗೆ ಕನ್ನಡ ಪರೀಕ್ಷೆಯಲ್ಲಿ 'ಹಡಗು' ಪದವನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಬೇಕಿತ್ತು. ಇವಳಿಗೆ ಹಡಗು ಅಪರಿಚಿತ ಪದ! ಹಾಗಾದರೆ ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸುವುದು ಹೇಗೆ? ಅವಳು ತನ್ನದೇ ವಿಶೇಷ ಬುದ್ಧಿವಂತಿಕೆ ಬಳಸಿ ವಾಕ್ಯ ರಚಿಸಿಯೇ ಬಿಟ್ಟಳು. 'ಹಡಗು ಎಂದರೆ ಏನು ಎಂದು ನಾನು ನನ್ನ ಗೆಳತಿ ರಾಣಿಯನ್ನು ಕೇಳಿದೆ. ಅವಳು 'ಹಡಗು' ಎಂದರೆ ಏನೆಂದು ತನಗೂ ಗೊತ್ತಿಲ್ಲ ಎಂದಳು' ಎಂದು ಬರೆದಿದ್ದಾಗಿ ಹೇಳಿದಳು. ಅವಳ ಮಾತು ಕೇಳಿ ನಾನು ಕಕ್ಕಾಬಿಕ್ಕಿ!

**ದಿವ್ಯಶ್ರೀ ವಿಕ್ರಮ್**





## ಕ್ಯಾಪಿಟಲ್ ಸಿಸ್ಟರ್

ನಮ್ಮ ವಿಭವ ಎಲ್‌ಕೆಜಿ ಹಾಗೂ ಮಗಳು ವೈಷ್ಣು 9ನೇ ತರಗತಿಯಲ್ಲಿದ್ದಾರೆ. ಒಂದು ದಿನ ನಮ್ಮ ಮಗಳು ರಾತ್ರಿ ತಮ್ಮನಿಗೆ ಪ್ರೀತಿಯಿಂದ 'you are my small brother' ಎಂದಳು. ತಕ್ಷಣ ಅವನು ಅಕ್ಕನಿಗೆ 'you are my capital sister' ಎಂದ. ನಾವೆಲ್ಲ ಜೋರಾಗಿ ನಕ್ಕೆವು. ಪಾಪ ಅವನು Big letter, Small letter ಗುಂಗಿನಲ್ಲಿದ್ದ. ಹೀಗಾಗಿ, 'you are my big sister' ಎನ್ನುವ ಬದಲು ಶಾಲೆಯಲ್ಲಿ ಹೇಳುವ ಹಾಗೆ capital ಪದ ಬಳಸಿ ನಮ್ಮೆಲ್ಲರನ್ನು ನಗಿಸಿದ.

**ಪ್ರಮೋದ್ ಕೆ. ಕುಲಕರ್ಣಿ**